112

**<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಎಲ್ ಅನಿಲ್ ಕುಮಾರ್,(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು 72ನೇ ನಿಯಮದ ಮೇರೆಗೆ ಮಂಡಿಸಿರುವ ಸೂಚನೆ ಸಂಖ್ಯೆ: 112ಕ್ಕೆ ಉತ್ತರಿಸುವ ಕುರಿತು.</u>**

**<u>ಸೂಚನೆ:</u>**

ಯೋಜನೆ ವಿಭಾಗ ಮತ್ತು ಉಪ ವಿಭಾಗಗಳು ಪಿಎಂಜಿಎಸ್‌ವೈ ಸಂಪರ್ಕವಿಲ್ಲದ ವಾಸಸ್ಥಳಗಳಿಗೆ ಉತ್ತಮ ಗುಣಮಟ್ಟದ ರಸ್ತೆ ಸಂಪರ್ಕವನ್ನು ಒದಗಿಸುತ್ತಿದ್ದು, ಪಿಎಂಜಿಎಸ್‌ವೈ ನಿಂದ ಹಳ್ಳಿ ಹಳ್ಳಿಗಳಲ್ಲಿ ಡಾಂಬರು ರಸ್ತೆ ನಿರ್ಮಿಸಲು ಸಾಧ್ಯವಾಗಿತ್ತು. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಗೆ 5 ವರ್ಷಗಳಿಂದ ಯಾವುದೇ ಅನುದಾನ ನೀಡದೇ ಇರುವುದರಿಂದ ಕಳೆದ 5 ವರ್ಷಗಳಲ್ಲಿ ಗ್ರಾಮೀಣ ಭಾಗದ ರಸ್ತೆಗಳು ನಿರ್ಮಾಣವಾಗದೇ ಗ್ರಾಮೀಣ ಭಾಗದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ. ಪ್ರಸ್ತುತ ಈ ಕಛೇರಿಗೆ ಯಾವುದೇ ಹೊಸ ರಸ್ತೆಯ ನಿರ್ಮಾಣ ಕಾಮಗಾರಿ ಇಲ್ಲದೇ ಇರುವುದು ಕಂಡು ಬಂದಿದ್ದು, ಎಲ್ಲಾ ಗ್ರಾಮೀಣ ರಸ್ತೆಯ ಅಭಿವೃದ್ಧಿ ಕೆಲಸವನ್ನು ಈ ಸಂಸ್ಥೆಯಿಂದ ಅನುಷ್ಠಾನಗೊಳಿಸಲು ಸೂಕ್ತವಾಗಿರುವುದರ ಕುರಿತು.

**<u>ಉತ್ತರ:</u>**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯ ಪ್ರಮುಖ ಯೋಜನೆಗಳಾದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯು 2017-18 ನೇ ಸಾಲಿನಲ್ಲಿ ಮುಕ್ತಾಯವಾಗಿರುತ್ತದೆ.

2009-10 ರಿಂದ 2016-17 ರವರೆಗೆ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರ ಗರಿಷ್ಠ 20 ಕಿ.ಮೀ.ಗಳಂತೆ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 17765.42 ಕಿ.ಮೀ. ರಸ್ತೆಗಳನ್ನು ರೂ. 10340.35 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ- ಹಂತ-1 ರಿಂದ ಹಂತ-4 ಯೋಜನೆಯನ್ನು ಜಾರಿಗೆ ತಂದು ಪೂರ್ಣಗೊಳಿಸಲಾಗಿದೆ.

1. 2022-23 ಸಾಲಿನಲ್ಲಿ ಪಿಎಂಜಿಎಸ್‌ವೈ (ಅಭಿವೃದ್ಧಿ) ಯೋಜನೆಯಡಿ ರೂ. 1219.95 ಕೋಟಿಗಳ ಅನುದಾನ, ಪಿಎಂಜಿಎಸ್‌ವೈ (ನಿರ್ವಹಣೆ) ಯೋಜನೆಯಡಿ ರೂ. 81.52 ಕೋಟಿಗಳು ಹಾಗೂ ಎನ್‌ಜಿಎನ್‌ಆರ್‌ವೈ (ನಿರ್ವಹಣೆ) ಯೋಜನೆಯಡಿ ರೂ. 120.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.
2. 2022-23ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ಗ್ರಾಮೀಣ ರಸ್ತೆಗಳನ್ನು ಕೆಆರ್‌ಆರ್‌ಡಿಎ ಸಂಸ್ಥೆಯಿಂದ ಅಭಿವೃದ್ಧಿ ಪಡಿಸಲು ರೂ. 101.67 ಕೋಟಿಗಳ ಅನುದಾನವನ್ನು ಮಂಜೂರಾತಿ ನೀಡಲಾಗಿರುತ್ತದೆ. 2020-21 ಹಾಗೂ 2021-22 ನೇ ಸಾಲಿನಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ವಿಶೇಷ ಅಭಿವೃದ್ಧಿ ಯೋಜನೆಯಡಿ 581.42 ಕಿ.ಮೀ. ರಸ್ತೆಗಳನ್ನು ರೂ. 291.04 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ.

**<u>ಕಡತ ಸಂಖ್ಯೆ: ಗ್ರಾಅಪ/ಆರ್‌ಆರ್‌ಸಿ/16ನೇ ವಿಸ/ನಿ-73/ಸಂಖ್ಯೆ-112/2023</u>**

(ಪ್ರಿಯಾಂಕ್. ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
ಸಚಿವರು